ಚುಟುಕು ಕ್ರಿಕೆಟ್ ಋತು ಮರಳಿ ಅರಳುತ್ತಿದೆ. ಈ ಬಾರಿಯದು ಯುಗಳ ಸಂಭ್ರಮ. ಮೊದಲಿಗೆ 'ಐಪಿಎಲ್ 14ನೇ ಆವೃತ್ತಿ'ಯ ಎರಡನೇ ಇನಿಂಗ್ಸ್; ಅದರ ಬೆನ್ನಿಗೆ 'ಟ್ವೆಂಟಿ–20 ವಿಶ್ವಕಪ್'. ಭರ್ತಿ ಎರಡು ತಿಂಗಳು ಚುಟುಕು ಕ್ರಿಕೆಟ್ ರಸದೌತಣ. ಕೋವಿಡ್ ಆತಂಕದ ನಡುವೆಯೂ ಕ್ರಿಕೆಟ್‌ನ ಹಿತವಾದ ಜ್ವರಕ್ಕೆ ಮೈಮನಗಳನ್ನು ಒಡ್ಡಿಕೊಳ್ಳುವ ಸಮಯ. ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಸರಣಿಯಲ್ಲಿ ಅದ್ಭುತ ಪ್ರದರ್ಶನ ನೀಡಿದ ಭಾರತದ ಆಟಗಾರರು, ಈಗ ಚುಟುಕು ಕ್ರಿಕೆಟ್ ಅಂಗಳಕ್ಕೆ ಇಳಿಯುತ್ತಿದ್ದಾರೆ. ಅನುಭವಿಗಳೊಂದಿಗೆ, ಹೊಸ ಹುಡುಗರ ಪ್ರತಿಭಾವಿಲಾಸ ಕಣ್ತುಂಬಿಕೊಳ್ಳಲು ಸಹೃದಯರು ಕಾತರರಾಗಿದ್ದಾರೆ. ತೋಳ್ಬಲ, ಕಣ್ಣಮಿಂಚು, ಕೈಚಳಕ, ಪಾದಗಳ ಚಲನೆ, ಮಾನಸಿಕ ಸಂಘರ್ಷ – ಕ್ರಿಕೆಟ್ ಇಷ್ಟಪಡಲು ಬೇರೇನು ಬೇಕು.

■ ಪ್ರಮೋದ

**ಸೆ. 19ರಿಂದ ಅ. 15**
**'ಐಪಿಎಲ್'**

**ಅ. 17ರಿಂದ ನ. 14**
**'ಟಿ–20 ವಿಶ್ವಕಪ್'**

